## ತಿದ್ದುಪಡೆ ಸುತ್ತೋಲೆ

ವಿಷಯ: ಸಪ್ಟೆಂಬರ/ಅಕ್ಟೋಬರ 2023ರಲ್ಲಿ ಜರುಗುವ ಸ್ನಾತಕೋತ್ತರ 2, 4 ಮತ್ತು 6ನೇ ಸೆಮಿಸ್ಟರ್‌ನ ರೆಗ್ಯೂಲರ್/ರಿಪಿಟರ್ಸ್ ಹಾಗೂ ಎಲ್ಲ ಡಿಪ್ಲೊಮಾ ಸೆಮಿಸ್ಟರ್/ಸರ್ಟಿಫಿಕೇಟ ಕೋರ್ಸಗಳ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವ ಕುರಿತು.

ಉಲ್ಲೇಖ:
1) ನಂ.ಕವಿವಿ/ಪರೀಕ್ಷಾ–ಜಿಎಡಿ/2023/508 ದಿನಾಂಕ: 18.08.2023
2) ನಂ.ಕವಿವಿ/ಪರೀಕ್ಷಾ–ಜಿಎಡಿ/2023/549 ದಿನಾಂಕ: 29.08.2023
3) ಕುಲಪತಿಗಳ ಆದೇಶ ದಿನಾಂಕ: 30.08.2023
4) ನಂ.ಕವಿವಿ/ಪರೀಕ್ಷಾ–ಗೌಪ್ಯ/2023/133 ದಿನಾಂಕ: 30.08.2023

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಎಲ್ಲ ಸ್ನಾತಕೋತ್ತರ /ಪಿಜಿ ಡಿಪ್ಲೊಮಾ ವಿಭಾಗಗಳ ಅಧ್ಯಕ್ಷರು / ಸಂಯೋಜಕರು / ನಿರ್ದೇಶಕರು ಕ.ವಿ.ವಿ., ಧಾರವಾಡ ಹಾಗೂ ಆಡಳಿತಾಧಿಕಾರಿಗಳು ಹಾವೇರಿ / ಗದಗ / ಕಾರವಾರ ಕ..ವಿ.ವಿ., ಸ್ನಾತಕೋತ್ತರ ಕೇಂದ್ರಗಳು / ಕ.ವಿ.ವಿ., ವ್ಯಾಪ್ತಿಯ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರರಿಗೆ ಗಮನಕ್ಕೆ ತರಬಯಸುವುದೇನೆಂದರೆ, ಸ್ನಾತಕೋತ್ತರ 2, 4 ಮತ್ತು 6ನೇ ಸೆಮಿಸ್ಟರ್‌ನ ರೆಗ್ಯೂಲರ್/ರಿಪಿಟರ್ಸ್ ಹಾಗೂ ಎಲ್ಲ ಡಿಪ್ಲೊಮಾ ಸೆಮಿಸ್ಟರ್/ಸರ್ಟಿಫಿಕೇಟ ಕೋರ್ಸಗಳ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ: **20.09.2023** ರಿಂದ **10.10.2023** ರವರೆಗೆ ಜರುಗಿಸಲು ಸೂಚಿಸಲಾಗಿದೆ. ಪ್ರಾಯೋಗಿಕ ಪರೀಕ್ಷೆಯ ಪ್ರಾರಂಭಕ್ಕಿಂತ ಮುಂಚಿತವಾಗಿ ಈ ಕೆಳಗಿನ ಹಂತಗಳನ್ನು ಕಡ್ಡಾಯವಾಗಿ ಪೂರೈಸುವುದು.

1. ಹಾಜರಾತಿಯನ್ನು UUCMS ತಂತ್ರಾಂಶದಲ್ಲಿ ನೊಂದಾಯಿಸುವುದು.
2. ಪರೀಕ್ಷಾ ಅರ್ಜಿಯನ್ನು ತುಂಬಿದ ವಿದ್ಯಾರ್ಥಿಗಳ ಮಾಹಿತಿಯನ್ನು Principal/Chairman login ನಲ್ಲಿ ಪ್ರಾಚಾರ್ಯರರು/ ಅಧ್ಯಕ್ಷರು UUCMS ತಂತ್ರಾಂಶದಲ್ಲಿ ತಪ್ಪದೇ ಅನುಮೋದಿಸುವುದು.
3. ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು UUCMS ತಂತ್ರಾಂಶದಿಂದ ಕಡ್ಡಾಯವಾಗಿ ಡೌನಲೋಡ್ ಮಾಡಿಕೊಳ್ಳುವುದು.
4. ಮಹಾವಿದ್ಯಾಲಯದ Admin login ನಲ್ಲಿ ಗರಿಷ್ಠ ತಲಾ 20 ವಿದ್ಯಾರ್ಥಿಗಳಂತೆ ಬ್ಯಾಚ್‌ಗಳನ್ನು ರಚಿಸುವುದು.

   **ವಿ.ಸೂ: ಬ್ಯಾಚ್‌ಗಳನ್ನು Outside UUCMS ನಲ್ಲಿ ಮಾಡತಕ್ಕದ್ದಲ್ಲ.**
5. ದಿನಾಂಕ: **20.09.2023** ರಿಂದ **10.10.2023** ರ ವರೆಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸಿ ಆಯಾ ದಿನದ ಬ್ಯಾಚುಗಳ ಪ್ರಾಯೋಗಿಕ ಅಂಕಗಳನ್ನು ಅದೇ ದಿನದಂದು UUCMS ನಲ್ಲಿ ಕಡ್ಡಾಯವಾಗಿ ನಮೂದಿಸುವುದು.

   **ವಿ.ಸೂ: ಪರೀಕ್ಷೆ ಜರುಗಿದ ಮರುದಿನ ಅಂಕಗಳನ್ನು ನಮೂದಿಸಲು ಸಾಧ್ಯವಾಗುವುದಿಲ್ಲ.**
6. ಸಂಬಂಧಪಟ್ಟ ವಿಷಯದ ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಅಂಕಗಳ ಯಾದಿಯನ್ನು ದ್ವಿ ಪ್ರತಿಯಲ್ಲಿ ಸಿದ್ಧಪಡಿಸಿ ಒಂದು ಪ್ರತಿಯನ್ನು ಗಣಕಯಂತ್ರ ವಿಭಾಗದ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಂಬಂಧಿಸಿದ ಪರೀಕ್ಷಾ ವಿಭಾಗದ ಅಧೀಕ್ಷಕರಿಗೆ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಸಂಬಂಧಿಸಿದ ಎಲ್ಲ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವುದು.

ಕುಲಸಚಿವರು(ಮೌಲ್ಯಮಾಪನ)

ಇವರಿಗೆ,

1) ಅಧ್ಯಕ್ಷರು/ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ವಿಭಾಗಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಆಡಳಿತಾಧಿಕಾರಿಗಳು, ಹಾವೇರಿ / ಗದಗ / ಕಾರವಾರ ಸ್ನಾತಕೋತ್ತರ ಕೇಂದ್ರಗಳು, ಕ.ವಿ.ವಿ., ಧಾರವಾಡ
3) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ :**

1. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಉಪಕುಲಸಚಿವರು, ವಿದ್ಯಾಮಂಡಳ/ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ.
3. ಸಹಾಯಕ ಕುಲಸಚಿವರು, ವಿದ್ಯಾಮಂಡಳ/ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ.
4. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ. ಸದರ ಸುತ್ತೋಲೆಯನ್ನು ಕವಿವಿ ಅಂತರ್ಜಾಲದಲ್ಲಿ ಪ್ರಕಟಿಸುವುದು.
5. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
8. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.